ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ ವಿಸ್ತರಣೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ  ದಿನಾಂಕ : DATE : 4/12/20

# ಅಧಿವೇಶನಕ್ಕೆ ಮುನ್ನ ವಿಸ್ತರಣೆ?

## ಸಿಎಂ ವಿಶ್ವಾಸ | ಬಿಜೆಪಿ ರಾಜ್ಯ ಉಸ್ತುವಾರಿ ಭೇಟಿ ಬಳಿಕ ಸ್ಪಷ್ಟತೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು 4-12-20

ವಿಧಾನಮಂಡಲ ಅಧಿವೇಶನಕ್ಕೆ ಮುನ್ನವೇ ಸಚಿವ ಸಂಪುಟ ವಿಸ್ತರಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತೀವ್ರ ಆಸಕ್ತಿ ಹೊಂದಿದ್ದು, ಬೆಳಗಾವಿ ಸಭೆಗಳತ್ತ ಆಕಾಂಕ್ಷಿಗಳು ಚಿತ್ತ ನೆಟ್ಟಿದ್ದಾರೆ. ಮಹತ್ವದ ಮಸೂದೆ, ವಿಷಯಗಳು ಅಧಿವೇಶನದಲ್ಲಿ ಚರ್ಚೆಗೆ ಬರಲಿವೆ. ಪ್ರತಿಪಕ್ಷಗಳ ಸವಾಲು ಸಮರ್ಥವಾಗಿ ನಿಭಾಯಿಸಲು ಹುರುಪುಳ್ಳ ತಂಡವೂ ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಒತ್ತಡ ಮುಕ್ತವಾಗಿ ಅಧಿವೇಶನ ಎದುರಿಸಬೇಕು ಎನ್ನುವುದು ಬಿಎಸ್‌ವೈ ಆಸಕ್ತಿ ಹಿಂದಿರುವ ಲೆಕ್ಕಾಚಾರ ಎಂದು ಸಿಎಂ ಆಪ್ತ ಮೂಲಗಳು ತಿಳಿಸಿವೆ.



ಸೋಮವಾರದಿಂದ ಅಧಿವೇಶನ ಆರಂಭವಾಗಲಿದೆ. ಅದಕ್ಕೂ ಮುಂಚೆ ಮಂತ್ರಿ ಮಾಡಿ ಎಂದು ಹಲವರು ಒತ್ತಡ ಹೇರಿದ್ದು, ವಿಳಂಬಕ್ಕೆ ಬಹಿರಂಗವಾಗಿ ಬೇಸರ ವ್ಯಕ್ತಪಡಿಸಿದ್ದಾರೆ. ಅಧಿವೇಶನ, ಗ್ರಾಪಂ ಚುನಾವಣೆ ಬಳಿಕ ಬಿಬಿಎಂಪಿ, ಬೆಳಗಾವಿ ಲೋಕಸಭೆ, ಮಸ್ಕಿ ಹಾಗೂ ಬಸವಕಲ್ಯಾಣ ವಿಧಾನಸಭೆ ಉಪಚುನಾವಣೆ ಘೋಷಣೆ ಸಾಧ್ಯತೆಗಳಿವೆ. ಇದರಿಂದಾಗಿ ಮತ್ತೆರಡು ತಿಂಗಳು ಕಾದು ಕುಳಿತುಕೊಳ್ಳಬೇಕಾಗುತ್ತದೆ. ಹೀಗಾಗಿ ಆದಷ್ಟು ಬೇಗ ವರಿಷ್ಠರನ್ನು ಒಪ್ಪಿಸಿ ಎಂದು ಬಿಎಸ್‌ವೈಗೆ ಕೆಲವು ಶಾಸಕರು ದುಂಬಾಲು ಬಿದ್ದಿದ್ದಾರೆ.

ಪಕ್ಷದ ರಾಜ್ಯ ನೂತನ ಉಸ್ತುವಾರಿ ಹಾಗೂ ಸಂಸದ ಅರುಣ್ ಸಿಂಗ್ ರಾಜ್ಯಕ್ಕೆ ಭೇಟಿ ನೀಡಿದ ಬಳಿಕ ಸಚಿವ ಸಂಪುಟ ವಿಚಾರದಲ್ಲಿ ಸ್ಪಷ್ಟತೆ ಸಿಗಲಿದೆ. ಬೆಳಗಾವಿಯಲ್ಲಿ ಡಿ.4ರಂದು ಪಕ್ಷದ ಕೋರ್ ಕಮಿಟಿ, ಡಿ.5ರಂದು ರಾಜ್ಯ ಕಾರ್ಯಕಾರಿಣಿ ಸಭೆಗಳಲ್ಲಿ ಅರುಣ್ ಸಿಂಗ್ ಪಾಲ್ಗೊಳ್ಳಲಿದ್ದು, ಉಸ್ತುವಾರಿಯಾದ ಬಳಿಕ ಮೊದಲ ಭೇಟಿ ಇದಾಗಿದೆ. ಗ್ರಾಪಂ ಚುನಾವಣೆ, ಅಧಿವೇಶನ ತಲೆ ಮೇಲೆ ಇಟ್ಟುಕೊಂಡು ಸಂಪುಟ ವಿಸ್ತರಣೆಗೆ ಕೈಹಾಕಿದರೆ ಅನಗತ್ಯವೆಂಬ ಗೊಂದಲ ಸೃಷ್ಟಿಯಾಗುವ ಆತಂಕವಿದೆ. ಇದೇ ಕಾರಣಕ್ಕೆ ವರಿಷ್ಠರು ಕಾದು ನೋಡುವ ತಂತ್ರ ಅನುಸರಿಸಿದ್ದಾರೆ. ದೆಹಲಿ ಹಿರಿಯ ನಾಯಕರು ಈ ನಿಲುವು ಬದಲಿಸಿಕೊಂಡಿದ್ದಾರೆಯೆ? ಎನ್ನುವುದು ಖಚಿತಪಟ್ಟಿಲ್ಲವೆಂದು ಮೂಲಗಳು ತಿಳಿಸಿವೆ.



ಬೆಳಗಾವಿಯ ಚನ್ನಮ್ಮ ವೃತ್ತದಲ್ಲಿ ಬಿಜೆಪಿ ಬಾವುಟ ಕಂಗೊಳಿಸುತ್ತಿರುವುದು.

### ಇಂದು ಕೋರ್ ಕಮಿಟಿ, ನಾಳೆ ಕಾರ್ಯಕಾರಿಣಿ ಸಭೆ

ಬೆಳಗಾವಿ: ಬೆಳಗಾವಿಯಲ್ಲಿ ಶನಿವಾರ (ಡಿ.5) ಜರುಗುವ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರು ಭರ್ಜರಿ ತಯಾರಿ ನಡೆಸಿದ್ದಾರೆ. ನಗರದ ಚನ್ನಮ ವೃತ್ತ, ಕಾರ್ಯಕಾರಿಣಿ ನಡೆಯುವ ಗಾಂಧಿಭವನ, ಕೊಲ್ಹಾಪುರ ವೃತ್ತ ಸೇರಿ ಪ್ರಮುಖ ರಸ್ತೆಯಲ್ಲಿ ಬಿಜೆಪಿ ಧ್ವಜಗಳು ರಾರಾಜಿಸುತ್ತಿವೆ. ಪಕ್ಷದ ರಾಷ್ಟ್ರ, ರಾಜ್ಯ ನಾಯಕರ ಭಾವಚಿತ್ರವುಳ್ಳ ಕಟೌಟ್, ಫ್ಲೆಕ್ಸ್, ಬ್ಯಾನರ್‌ಗಳನ್ನು ಕಾರ್ಯಕರ್ತರು ಅಳವಡಿಸಿದ್ದಾರೆ. ಡಿ.4ರಂದು ಬೆಳಗಾವಿಯಲ್ಲಿ ಬಿಜೆಪಿ ಕೋರ್ ಕಮಿಟಿ ಸಭೆ ಸಹ ನಡೆಯಲಿದೆ.

### ಸೂಚನೆ ಕುತೂಹಲ

ರಾಜ್ಯಕ್ಕೆ ಅರುಣ್ ಸಿಂಗ್ ಬರಿಗೈಯಲ್ಲಂತೂ ಬರುವುದಿಲ್ಲ. ವರಿಷ್ಠರ ಹಲವು ಸೂಚನೆಗಳ ಜತೆ ಆಗಮಿಸಿ, ಬೆಳಗಾವಿ ಸಭೆಯಲ್ಲಿ ಪ್ರಸ್ತಾಪಿಸುವ ನಿರೀಕ್ಷೆಯಿದೆ. ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆ ವಿಷಯವೂ ಸೂಚನೆಗಳಲ್ಲಿ ಸೇರಿರಲಿವೆ. ಇಲ್ಲವೇ ಬಿಎಸ್‌ವೈ ಸ್ವತಃ ಚರ್ಚಿಸಿ ಒಪ್ಪಿಗೆ ಪಡೆಯಲಿದ್ದಾರೆ ಎಂದು ತರ್ಕಿಸಲಾಗುತ್ತಿದೆ. ನಿಗಮ- ಮಂಡಳಿಗಳಿಗೆ ಕೆಲವು ಶಾಸಕರನ್ನು ನೇಮಿಸಿಯಾಗಿದೆ. ಪೈಪೋಟಿಯಲ್ಲಿದ್ದ ಆಕಾಂಕ್ಷಿಗಳ ಸಂಖ್ಯೆ ತಗ್ಗಿದ್ದು, ಇದೆಲ್ಲವನ್ನು ಗಮನಿಸಿರುವ ವರಿಷ್ಠರು ಸಮ್ಮತಿಸಿದರೂ ಅಧಿವೇಶನಕ್ಕೆ ಮುನ್ನವೇ ಸಂಪುಟ ಸಂಕಟ ಬಗೆಹರಿಯುತ್ತದೆ ಎಂಬ ಖಾತರಿಯಿಲ್ಲ ಎನ್ನಲಾಗುತ್ತಿದೆ.

### ವೈಯಕ್ತಿಕವಾಗಿ ನೋವು ಆದಾಗ ಕೆಲವರು

ಭಾವಾವೇಶದಲ್ಲಿ ಮಾತನಾಡುವುದು ಸಹಜ. ವಿಧಾನ ಪರಿಷತ್ ಸದಸ್ಯ ವಿಶ್ವನಾಥ್ ಅವರು ಅದೇ ರೀತಿ ಮಾತನಾಡಿರಬಹುದು. ಆದರೆ ಅವರು ಒಂಟಿಯಲ್ಲ. ಮುಖ್ಯಮಂತ್ರಿ ಸಹಿತ ನಾವು ಹದಿನೇಳು ಮಂದಿಯೂ ಅವರ ಜತೆಗಿದ್ದೇವೆ. ನಾವೆಲ್ಲರೂ ಈಗ ಬಿಜೆಪಿ ಕಾರ್ಯಕರ್ತರೇ ಆಗಿದ್ದೇವೆ. ಅವರನ್ನು ಏಕಾಂಗಿ ಯಾಗಿಸುವ ಪ್ರಶ್ನೆಯೇ ಇಲ್ಲ.

[illegible] ಆರೋಗ್ಯ ಸಚಿವ

### ಉಪ್ಪಾರ ಅಭಿವೃದ್ಧಿ ನಿಗಮದ ನೇಮಕ ರದ್ದು

ಬೆಂಗಳೂರು: ಬಿಜೆಪಿಯಲ್ಲೇ ತೀವ್ರ ಆಕ್ರೋಶಕ್ಕೆ ಗುರಿಯಾಗಿದ್ದ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಕೆ.ಗಿರೀಶ್ ಉಪ್ಪಾರ್ ಹಾಗೂ 7 ಸದಸ್ಯರ ನೇಮಕವನ್ನು ರದ್ದುಪಡಿಸಿ ಸರ್ಕಾರ ಆದೇಶಿಸಿದೆ. ಕಡೂರು ಶಾಸಕ ಬೆಳ್ಳಿ ಪ್ರಕಾಶ್ ನೇರವಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿಯಾಗಿ, ಕ್ಷೇತ್ರದಲ್ಲಿ ಪಕ್ಷ ವಿರೋಧಿ ಚಟುವಟಿಕೆ ಮಾಡಿದವರಿಗೆ ಸ್ಥಾನಮಾನ ಕಲ್ಪಿಸಿದರೆ ಪಕ್ಷಕ್ಕೆ ಮುಜುಗರ ಹಾಗೂ ಕಾರ್ಯಕರ್ತರಿಗೂ ಅಪಮಾನ ಸಹಿಸಲಾಗದು ಎಂದು ಕಿಡಿಕಾರಿದ್ದರು. ಇದಕ್ಕೆ ಬಿಎಸ್‌ವೈ ತಕ್ಷಣವೇ ಸ್ಪಂದಿಸಿದ್ದು, ನೇಮಕ ಆದೇಶ ರದ್ದುಪಡಿಸಲಾಗಿದೆ. ನಿಗಮದ ಅಧ್ಯಕ್ಷರ ಜತೆಗೆ ಸದಸ್ಯರಾಗಿದ್ದ ಪಾಂಡಪ್ಪ ಸಿದ್ದಾಪುರ, ಕೃಷ್ಣದೇವಾಡಿಗ, ಓಂಕಾರ ಮೂರ್ತಿ, ಶಾಮಾನಂದ ಪೂಜೇರಿ, ಎ.ಜಿ.ನಾಗರಾಜ ಸೇರಿ 7 ಜನರ ನೇಮಕವನ್ನೂ ಸರ್ಕಾರ ಹಿಂಪಡೆದಿದೆ.